# ಉದ್ಯೋಗವಾಗುತ್ತಿರುವ ರಾಜಕಾರಣ: ಸಭಾಪತಿ ಬಸವರಾಜ ಹೊರಟ್ಟಿ ಕಳವಳ

## ಕೆ.ಎಚ್.ಪಾಟೀಲರ 98ನೇ ಜಯಂತ್ಯುತ್ಸವ | ಕೆಎಚ್‌ಪಿ ಮಾತು ಮತ್ತು ಕೃತಿಗಳು ಮಾದರಿ

• **ಕನ್ನಡಪ್ರಭ ವಾರ್ತೆ** ಗದಗ

ರಾಜಕಾರಣ ಇಂದು ಉದ್ಯೋಗವಾಗಿ ಪರಿವರ್ತನೆಯಾಗುತ್ತಿದ್ದು ಇದು ಬೇಸರದ ಸಂಗತಿಯಾಗಿದೆ. ಹೊಸದಾಗಿ ರಾಜಕೀಯಕ್ಕೆ ಬರುವ ಯುವಕರು ತತ್ವ ಆದರ್ಶಗಳನ್ನು ರೂಢಿಸಿಕೊಳ್ಳಬೇಕು ಎಂದು ವಿಪ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ನಗರದ ಸ್ವಾಮಿ ವಿವೇಕಾನಂದ ಸಭಾಭವನದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕೆ.ಎಚ್. ಪಾಟೀಲ ಅವರ 98ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಸ್ತುತ ರಾಜಕಾರಣದಲ್ಲಿನ ಬೆಳವಣಿಗೆ ಕುರಿತು ಕಳವಳ ವ್ಯಕ್ತಪಡಿಸಿದರು.

ದಿ. ಕೆ.ಎಚ್. ಪಾಟೀಲ ಅವಧಿಯ ರಾಜಕಾರಣ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ ಹೊರಟ್ಟಿ, ಅವರ ಮಾತು ಮತ್ತು ಕೃತಿಗಳು ಇಂದಿಗೂ ಮಾದರಿ. ಅವರ ಮುಂದೆ ಸುಳ್ಳು ಹೇಳಲು ಸಾಧ್ಯವೇ ಇರಲಿಲ್ಲ, ರಾಜ್ಯದಲ್ಲಿ ಬಹುದೊಡ್ಡ ಹೋರಾಟಗಾರರಾಗಿದ್ದರು. ರಾಜಕಾರಣಕ್ಕೆ, ಸ್ನೇಹಕ್ಕೆ ಎಂದಿಗೂ ತೊಡಕು ತಂದುಕೊಂಡವರಲ್ಲ ಎಂದರು.

ಕಾಂಗ್ರೆಸ್ ಮುಖಂಡ ಎಚ್. ಆಂಜನೇಯ ಮಾತನಾಡಿ, ಎಚ್.ಕೆ. ಪಾಟೀಲರು ಮುಂದಿನ ದಿನಗಳಲ್ಲಿ ಸಿಎಂ ಆಗಬೇಕು ಎನ್ನುವುದು ನನ್ನ ಆಶಯವಾಗಿದೆ. ಕೆ.ಎಚ್. ಪಾಟೀಲರಿಗೆ ಸಿಗದೇ ಇರುವಂತಹ ಅವಕಾಶ ಎಚ್. ಕೆ. ಪಾಟೀಲರಿಗೆ ಸಿಗಲಿ. ಇಂದು ರಾಜಕೀಯ ಕಲುಷಿತವಾಗಿದೆ. ಪ್ರಾಮಾಣಿಕ ರಾಜಕೀಯ ಮಾಯವಾಗಿದೆ, ಕೆ.ಎಚ್. ಪಾಟೀಲರು ಹಾಕಿಕೊಟ್ಟ ತತ್ವ ಮಾರ್ಗದಲ್ಲಿ ಸಾಗಬೇಕು ಎಂದು ಹೇಳಿದರು.

ಮಾಜಿ ಶಾಸಕ ಡಿ.ಆರ್. ಪಾಟೀಲ ಮಾತನಾಡಿ, ಕೆ.ಎಚ್. ಪಾಟೀಲರು ದಿಟ್ಟ, ನಿರ್ಭಿಡೆಯ ನಾಯಕರಾಗಿದ್ದರು. ಅವರಂತವರನ್ನು ಈಗಲೂ ನೋಡಲು ಸಾಧ್ಯವಿಲ್ಲ, ನೇರವಾಗಿ ಮಾತನಾಡುವ ಅವರನ್ನು ಹಲವಾರು ಜನರು ವಿರೋಧಿಸುತ್ತಿದ್ದರು ಎಂದು ಅವರೊಂದಿಗಿನ ಒಡನಾಟವನ್ನು ಸ್ಮರಿಸಿಕೊಂಡರು. ಶಾಸಕ ಎಚ್.ಕೆ. ಪಾಟೀಲ ಪ್ರಾಸ್ತಾವಿಕ ಮಾತನಾಡಿದರು.



ಕೆ.ಎಚ್. ಪಾಟೀಲ ಕಾರ್ಯಕ್ರಮದಲ್ಲಿ ₹ 5 ಲಕ್ಷ ನಗದು ಸಹಿತ ಕೆ.ಎಚ್. ಪಾಟೀಲ ಪ್ರಶಸ್ತಿಯನ್ನು ನೇತ್ರತಜ್ಞ ಎಂ.ಎಂ. ಜೋಶಿ ಅವರಿಗೆ ವಿತರಿಸಲಾಯಿತು.

> ನಾವೆಲ್ಲಾ ಕೆ.ಎಚ್. ಪಾಟೀಲ ಅವರ ಗರಡಿಯಲ್ಲಿ ಬೆಳೆದವರು, ಅಂದು ಯುವ ನಾಯಕರಾಗಿದ್ದೆವು. ದೇವರಾಜ ಅರಸ ಬಲಗೈಯಾಗಿ ಕೆ.ಎಚ್. ಪಾಟೀಲ ಕೆಲಸ ಮಾಡಿದ್ದರು, ಹೊಂದಾಣಿಕೆ ಮಾಡಿಕೊಳ್ಳದ ನಾಯಕರಾಗಿದ್ದರು.
>
> • **ಎಚ್.ಎಂ. ರೇವಣ್ಣ** ಮಾಜಿ ಶಾಸಕ

ಕಾರ್ಯಕ್ರಮದಲ್ಲಿ ₹ 5 ಲಕ್ಷ ನಗದು ಸಹಿತ ಕೆ.ಎಚ್. ಪಾಟೀಲ ಪ್ರಶಸ್ತಿಯನ್ನು ನೇತ್ರತಜ್ಞ ಎಂ.ಎಂ. ಜೋಶಿ ಅವರಿಗೆ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಎಚ್.ಕೆ. ಪಾಟೀಲ, ಕೆ.ಎಚ್. ಮುನಿಯಪ್ಪ, ಬಿ.ಕೆ. ಹರಿಪ್ರಸಾದ, ಎ.ಎಂ. ಹಿಂಡಸಗೇರಿ, ಎಸ್.ಎಸ್. ಪಾಟೀಲ, ಪ್ರಮೋದ ಹೆಗಡೆ, ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿ ತೇಜಸ್ವಿ ಕಟ್ಟಿಮನಿ, ಜಿ.ಎಸ್. ಗಡ್ಡದೇವರಮಠ, ವಾಸಣ್ಣ ಕುರುಡಗಿ, ಕೊಟ್ರಪ್ಪ ಬಸೇಗಣ್ಣಿ, ಸಿದ್ದು ಪಾಟೀಲ, ವಿದ್ಯಾಧರ ದೊಡ್ಡಮನಿ, ಹುಮಾಯೂನ್ ಮಾಗಡಿ, ಸಚಿನ್ ಪಾಟೀಲ ಹಲವರು ಇದ್ದರು.

> ನಾನು ಯುವಕನಾಗಿದ್ದೆ. ಕೆ.ಎಚ್. ಪಾಟೀಲರು ನನಗೆ ರಾಜಕಾರಣದ ಮಾರ್ಗದರ್ಶನ ಮಾಡುತ್ತಿದ್ದು, ಬೈದು ಬುದ್ಧಿ ಹೇಳುತ್ತಿದ್ದರು. ಅವರೇ ಕರೆದು ಕೆಪಿಸಿಸಿಯಲ್ಲಿ ಒಂದು ಮಹತ್ವದ ಸ್ಥಾನ ಕೊಟ್ಟರು.
>
> • **ಕೆ.ಎಚ್. ಮುನಿಯಪ್ಪ** ಕೇಂದ್ರದ ಮಾಜಿ ಸಚಿವ

> ಎಂಎಂ ಜೋಶಿ ಅವರ ಕಣ್ಣಿನ ಸೇವೆ ಅನನ್ಯ. ಆರೋಗ್ಯ ಕ್ಷೇತ್ರದಲ್ಲಿ ಕರ್ನಾಟಕ ದೇಶದಲ್ಲಿಯೇ ಮುಂಚೂಣಿಯಲ್ಲಿದೆ. ಇದಕ್ಕೆ ಖಾಸಗಿ ವೈದ್ಯರ ಶ್ರಮದಾನವು ಕಾರಣ. ಕಾಯಕವೇ ಕೈಲಾಸ ಎಂದು ಜೋಶಿ ಕಾರ್ಯ ನಿರ್ವಹಿಸಿದ್ದಾರೆ.
>
> • **ಬಿ.ಕೆ. ಹರಿಪ್ರಸಾದ** ವಿಪಕ್ಷ ನಾಯಕ

ವಿಜಯವಾಣಿ
ನಂ 1 ಕನ್ನಡ ದಿನಪತ್ರಿಕೆ

## 19ರಂದು ಶಿರೂರ್ ಪಾರ್ಕ್ ಟೆಂಡರ್ ಶ್ಯೂರ್ ರಸ್ತೆಯಲ್ಲಿ ಆಯೋಜನೆ

# ಯುಗಾದಿ ಉತ್ಸವಕ್ಕೆ ಹುಬ್ಬಳ್ಳಿಗರ ಹುಮ್ಮಸ್ಸು

■ ವಿಜಯವಾಣಿ ಸುದ್ದಿಜಾಲ ಹುಬ್ಬಳ್ಳಿ

ಬಹು ನಿರೀಕ್ಷಿತ 'ಹುಬ್ಬಳ್ಳಿ ಯುಗಾದಿ ಉತ್ಸವ'ಕ್ಕೆ ಎರಡು ದಿನಗಳು ಮಾತ್ರ ಬಾಕಿ ಉಳಿದಿವೆ. ಒಂದೆಡೆ ಸಿದ್ಧತೆಗಳು ಭರದಿಂದ ಸಾಗಿದ್ದು, ಇನ್ನೊಂದೆಡೆ ದಿನದಿಂದ ದಿನಕ್ಕೆ ಜನರ ಕುತೂಹಲ ಹೆಚ್ಚುತ್ತಿದೆ. ಹಿಂದು ಸಂಸ್ಕೃತಿ ಮತ್ತು ಪರಂಪರೆಯನ್ನು ಸಾರುವ ಬಹು ದೊಡ್ಡ ಹಬ್ಬವನ್ನು ಸಾಕ್ಷೀಕರಿಸಲು ಜನತೆ ತುದಿಗಾಲ ಮೇಲೆ ನಿಂತಿದ್ದಾರೆ.




ಹುಬ್ಬಳ್ಳಿಯ ಎಸ್.ಎಸ್. ಶೆಟ್ಟರ್ ಫೌಂಡೇಷನ್ ನೇತೃತ್ವದಲ್ಲಿ ಹಾಗೂ ಕನ್ನಡದ ನಂ.1 ದಿನಪತ್ರಿಕೆ 'ವಿಜಯವಾಣಿ' ಮತ್ತು 'ದಿಗ್ವಿಜಯ ನ್ಯೂಸ್' ಸಹಯೋಗದಲ್ಲಿ ವಿದ್ಯಾನಗರ ಶಿರೂರ್ ಪಾರ್ಕ್ ಟೆಂಡರ್ ಶ್ಯೂರ್ ರಸ್ತೆಯಲ್ಲಿ ಮಾ. 19ರಂದು ಹುಬ್ಬಳ್ಳಿ ಯುಗಾದಿ ಉತ್ಸವ ಆಯೋಜಿಸಲಾಗಿದೆ.

'ಇದು ಬರೀ ಹಬ್ಬವಲ್ಲ, ಹೊಸ ವರುಷದ ಹುಮ್ಮಸ್ಸು' ಎಂಬ ಘೋಷವಾಕ್ಯದೊಂದಿಗೆ ಆಚರಿಸಲಾಗುವ ಹುಬ್ಬಳ್ಳಿ ಯುಗಾದಿ ಉತ್ಸವ ಈಗಾಗಲೇ ಸಾಕಷ್ಟು ಕುತೂಹಲ ಮೂಡಿಸಿದೆ. ಹಬ್ಬದ ರೀತಿಯಲ್ಲಿ ಆಚರಿಸಲು ಜನರು ಅಣಿಯಾಗಿದ್ದಾರೆ. ಗ್ರಾಮೀಣ ಸೊಗಡು, ಸಾಂಪ್ರದಾಯಿಕ ಉಡುಗೆಯೊಂದಿಗೆ ಮೆರವಣಿಗೆ, ಜನಪದ ನೃತ್ಯ, ಹಾಸ್ಯ ನಾಟಕ, ಸಂಗೀತ ಸಂಜೆ ಕಾರ್ಯಕ್ರಮಗಳು ಉತ್ಸವದ ಭಾಗವಾಗಿವೆ. ಬೆಳಗ್ಗೆಯಿಂದ ರಾತ್ರಿಯವರೆಗೆ ನಡೆಯುವ ಕಾರ್ಯಕ್ರಮಗಳು ಜನತೆಗೆ ಸಾಕಷ್ಟು ಮನರಂಜನೆ ನೀಡಲಿವೆ.

ಧಾರವಾಡ ಉತ್ಸವ, ಲಕ್ಕುಂಡಿ ಉತ್ಸವ ನೆನಪಿಸಿಕೊಳ್ಳುವ ಹುಬ್ಬಳ್ಳಿಗರಿಗೆ ಒಂದು ಉತ್ಸವದ ಅಗತ್ಯವಿತ್ತು. ಬಹು ವರ್ಷಗಳ ಈ ಬೇಡಿಕೆ ಈಡೇರುವ ಕಾಲ ಕೂಡಿ ಬಂದಂತಾಗಿದೆ. 'ಮೊದಲ ಬಾರಿ ಹುಬ್ಬಳ್ಳಿಯಲ್ಲಿ ಯುಗಾದಿ ಹಬ್ಬವನ್ನು ಸಾರ್ವಜನಿಕವಾಗಿ ಆಚರಿಸಲಾಗುತ್ತಿದೆ. ಹಿಂದು ಸಂಪ್ರದಾಯದ ಪ್ರಕಾರ ಯುಗಾದಿ ಹಬ್ಬಕ್ಕೆ ಬಹಳ ಮಹತ್ವವಿದೆ. ಸಾರ್ವಜನಿಕರು, ಮುಖ್ಯವಾಗಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು' ಎಂದು ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ್ ಮನವಿ ಮಾಡಿದ್ದಾರೆ.

ಹುಬ್ಬಳ್ಳಿಗೆ ಇಂಥದೊಂದು ಉತ್ಸವದ ಅಗತ್ಯವಿತ್ತು. ನಾವೆಲ್ಲ ಅತ್ಯಂತ ಕುತೂಹಲದಿಂದ ಎದುರು ನೋಡುತ್ತಿದ್ದೇವೆ ಎಂದು ಜಗದೀಶ ಕಲ್ಯಾಣಶೆಟ್ಟರ್ ಅಭಿಪ್ರಾಯಿಸಿದ್ದಾರೆ.

ಹುಬ್ಬಳ್ಳಿ ಯುಗಾದಿ ಉತ್ಸವದಲ್ಲಿ ಕರಕುಶಲ ಪ್ರದರ್ಶನ, ರಂಗೋಲಿ ಸ್ಪರ್ಧೆ, ಆಹಾರ ಮೇಳಕ್ಕೆ ಅವಕಾಶ ನೀಡಲಾಗಿದೆ. ಇಷ್ಟೊಂದು ವೈವಿಧ್ಯವುಳ್ಳ ಉತ್ಸವವನ್ನು ಎಲ್ಲಿಯೂ ಕೇಳಿಲ್ಲ. ಅಂದು (ಮಾ. 19) ನಾವೆಲ್ಲ ತುಂಬ ಉತ್ಸಾಹದಿಂದ ಪಾಲ್ಗೊಳ್ಳಲಿದ್ದೇವೆ ಎಂದು ಶಿರೂರ್ ಪಾರ್ಕ್ ನಿವಾಸಿ ಅಕ್ಕಮ್ಮ ಹೆಗಡೆ, ಬಾಳು ಪಾಟೀಲ, ಇತರರು ತಿಳಿಸಿದ್ದಾರೆ.

### ತ್ರೀ ಜನರೇಷನ್ ಸ್ಪರ್ಧೆ

ಹುಬ್ಬಳ್ಳಿ ಯುಗಾದಿ ಉತ್ಸವದ ಅಂಗವಾಗಿ 3ಜಿ (ತ್ರೀ ಜನರೇಷನ್) ಸ್ಪರ್ಧೆ ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ಅಜ್ಜ, ಮಗ, ಮೊಮ್ಮಗ ಅಥವಾ ತಾಯಿ, ಮಗಳು, ಮೊಮ್ಮಗಳು ಅಥವಾ ಅತ್ತೆ, ಸೊಸೆ, ಮೊಮ್ಮಗಳು ಭಾಗವಹಿಸಬಹುದು. ಸ್ಪರ್ಧಿಗಳು ಸಾಂಪ್ರದಾಯಿಕ ವಿಶೇಷ ವೇಷಭೂಷಣದಲ್ಲಿ ಬರಬೇಕು. ಸ್ಪರ್ಧಿಗಳಿಗೆ ಟೆಂಡರ್‌ಶ್ಯೂರ್ ರಸ್ತೆಯ ಚೇತನಾ ಕಾಲೇಜು ಪಕ್ಕದ ವೇದಿಕೆಯಲ್ಲಿ ರ‍್ಯಾಂಪ್ ವಾಕ್ ಮಾಡಿಸಲಾಗುವುದು. ವಿಜೇತರಿಗೆ ವಿಶೇಷ ಬಹುಮಾನ ನೀಡಲಾಗುವುದು.

ಆಸಕ್ತರು ಸಂಪರ್ಕಿಸಿ : 98869 22116

### ತುಂಬಾ ಖುಷಿಯಾಗಿದೆ

ವಿಜಯವಾಣಿ ದಿನಪತ್ರಿಕೆ ಹಾಗೂ ದಿಗ್ವಿಜಯ ನ್ಯೂಸ್ ವತಿಯಿಂದ



ಹುಬ್ಬಳ್ಳಿ ಯುಗಾದಿ ಉತ್ಸವವನ್ನು ಬಹಳ ವೈಶಿಷ್ಟ್ಯವಾಗಿ ಮತ್ತು ಅರ್ಥಪೂರ್ಣವಾಗಿ ಆಯೋಜಿಸಲಾಗಿದೆ ಎಂಬುದನ್ನು ತಿಳಿದು ತುಂಬಾ ಖುಷಿಯಾಗಿದೆ. ನಿಜವಾಗಿಯೂ ಇವರು ನಮ್ಮ ಸಾಂಸ್ಕೃತಿಕ ರಾಯಭಾರಿಗಳು. ಭಾರತೀಯ ಸಂಸ್ಕೃತಿ, ಪರಂಪರೆಯನ್ನು ಎತ್ತಿ ಹಿಡಿಯುವ ಕೆಲಸ ಮಾಡಿಕೊಂಡು ಬರುತ್ತಿರುವುದು ಪ್ರಶಂಸನೀಯ.

| ಶ್ರೀ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ ಮೂರುಸಾವಿರ ಮಠ, ಹುಬ್ಬಳ್ಳಿ

### ಹರ್ಷದ ಸಂಗತಿ

ಪ್ರಾಕೃತಿಕವಾಗಿ ಯುಗಾದಿಯೇ ಹೊಸ ವರ್ಷ ಎಂದು ನಿರೂಪಿಸಲ್ಪಟ್ಟಿದೆ. ಭಾರತೀಯ ಸಂಸ್ಕೃತಿ,



ಪರಂಪರೆಯಲ್ಲಿ ಯುಗಾದಿಗೆ ಹೆಚ್ಚಿನ ಮಹತ್ವವಿದೆ. ಇಂಥ ಹಬ್ಬವನ್ನು ಉತ್ಸವದ ರೂಪದಲ್ಲಿ ಆಚರಿಸಲು 'ವಿಜಯವಾಣಿ' ದಿನಪತ್ರಿಕೆ ಮುಂದಾಗಿರುವುದು ಹರ್ಷದ ಸಂಗತಿಯಾಗಿದೆ.

| ಪ್ರಲ್ಹಾದ ಜೋಶಿ ಕೇಂದ್ರ ಸಚಿವರು

### ಆಚಾರ-ವಿಚಾರ ತಿಳಿಸುವ ಪ್ರಯತ್ನ



ಹುಬ್ಬಳ್ಳಿ ಯುಗಾದಿ ಉತ್ಸವ ಆಯೋಜಿಸುವ ಮೂಲಕ ಭಾರತೀಯ ಸಂಸ್ಕೃತಿ, ಪರಂಪರೆ, ವಿಶೇಷತೆ, ಆಚಾರ-ವಿಚಾರಗಳನ್ನು ತಿಳಿಸುವ ಪ್ರಯತ್ನ ಮಾಡುತ್ತಿರುವುದು ಸಂತೋಷದ ಸಂಗತಿ. ಇಂಥ ವಿಚಾರಗಳಿಂದಲೇ ನಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕು.

| ಶ್ರೀ ಬಸವಲಿಂಗ ಸ್ವಾಮೀಜಿ ರುದ್ರಾಕ್ಷಿಮಠ, ಹುಬ್ಬಳ್ಳಿ

### ಎಲ್ಲರಿಗೂ ಇಷ್ಟವಾಗಲಿದೆ



ಹಿಂದು ಸಂಪ್ರದಾಯದ ಪ್ರಕಾರ ಯುಗಾದಿ ಬಹಳ ದೊಡ್ಡ ಹಬ್ಬವಾಗಿದೆ. ಇದರ ವೈಶಿಷ್ಟ್ಯ, ಮಹತ್ವ ಬಹಳಷ್ಟು ಜನರಿಗೆ ಗೊತ್ತಿಲ್ಲ. ಹೊಸ ವರ್ಷದ ಆರಂಭವೇ ಯುಗಾದಿ. ಹುಬ್ಬಳ್ಳಿ ಯುಗಾದಿ ಉತ್ಸವದಲ್ಲಿ ಹಬ್ಬದ ವಾತಾವರಣ ಇರಲಿದೆ. ಗ್ರಾಮೀಣ ಕ್ರೀಡೆಗಳು, ಹಾಸ್ಯ ನಾಟಕ, ಸಂಗೀತ ಸಂಜೆ, ಆಧ್ಯಾತ್ಮಿಕ ಪ್ರವಚನ ಎಲ್ಲರಿಗೂ ಆಪ್ತವಾಗಲಿದೆ.

| ಜಗದೀಶ ಶೆಟ್ಟರ್ ಮಾಜಿ ಸಿಎಂ

### ಅತ್ಯಂತ ಯಶಸ್ವಿಯಾಗಲಿ



'ವಿಜಯವಾಣಿ' ದಿನಪತ್ರಿಕೆ ಹಾಗೂ ದಿಗ್ವಿಜಯ ನ್ಯೂಸ್ ಸುದ್ದಿವಾಹಿನಿಯು ಆಗಾಗ ಸಮಾಜಕ್ಕೆ ಉಪಯುಕ್ತವಾದ ಬಹಳಷ್ಟು ಕೆಲಸಗಳನ್ನು ಮಾಡಿಕೊಂಡು ಬರುತ್ತಿವೆ. ಹಿಂದು ಸಂಪ್ರದಾಯದ ಪ್ರಕಾರ ಹೊಸ ವರ್ಷವಾದ ಯುಗಾದಿ ನಿಮಿತ್ತ ಆಯೋಜಿಸಿರುವ ಹುಬ್ಬಳ್ಳಿ ಯುಗಾದಿ ಉತ್ಸವವು ಒಂದು ಶ್ರೇಷ್ಠವಾದ ವಿಚಾರವಾಗಿದೆ. ಈ ಉತ್ಸವವು ಅತ್ಯಂತ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

| ಬಸವರಾಜ ಹೊರಟ್ಟಿ ವಿಧಾನ ಪರಿಷತ್ ಸಭಾಪತಿ

ಸಂಯುಕ್ತ ಕರ್ನಾಟಕ
ಶುಕ್ರವಾರ, 17, ಮಾರ್ಚ್, 2023 | 03
ಹುಬ್ಬಳ್ಳಿ | HUBBALLI

## ದಿ.ಕೆ.ಎಚ್. ಪಾಟೀಲರ 98ನೇ ಜಯಂತ್ಯುತ್ಸವದಲ್ಲಿ ಡಾ.ಎಂ.ಎಂ. ಜೋಶಿಗೆ ಪ್ರಶಸ್ತಿ ಪ್ರದಾನ | ರಾಜಕಾರಣಿಗಳಿಗೆ ಸಭಾಪತಿ ಹೊರಟ್ಟಿ ಸಲಹೆ

# ಮರ್ಯಾದೆ ಉಳಿಸಿಕೊಂಡು ರಾಜಕಾರಣ ಮಾಡಿ

**ಗದಗ:** ರಾಜ್ಯ ರಾಜಕಾರಣದಲ್ಲಿ ಹುಲಕೋಟಿ ಹುಲಿಯೆಂದೇ ಖ್ಯಾತರಾಗಿದ್ದ ದಿ. ಕೆ.ಎಚ್. ಪಾಟೀಲ ಕಾಲದ ರಾಜಕಾರಣಕ್ಕೂ ಇಂದಿನ ರಾಜಕಾರಣಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ರಾಜಕಾರಣಿಗಳು ಮರ್ಯಾದೆ ಉಳಿಸಿಕೊಂಡು ರಾಜಕಾರಣ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ನಗರದಲ್ಲಿ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ಗುರುವಾರ ನಡೆದ ದಿ.ಕೆ.ಎಚ್. ಪಾಟೀಲರ 98ನೆ ಜಯಂತ್ಯುತ್ಸವದಲ್ಲಿ ಮಾತನಾಡಿದ ಅವರು, ರಾಜಕೀಯ ಉದ್ಯೋಗ ಅಲ್ಲ. ಅದೊಂದು ಸೇವೆ. ಮತ ಹಾಕಿದ ಜನರಿಗೆ ಒಳ್ಳೆಯದು ಮಾಡಬೇಕು. ಜಿಲ್ಲೆಯಲ್ಲಿ ಒಳ್ಳೆಯ ಕೆಲಸ ಆಗಿದ್ದರೆ ಅದಕ್ಕೆ ಕೆ. ಎಚ್. ಪಾಟೀಲ ಕುಟುಂಬದ ಕೊಡುಗೆ ಅಪಾರ ಎಂದರು.

ಮಾಜಿ ಸಂಸದ ಕೆ.ಎಚ್. ಮುನಿಯಪ್ಪ, ಮಾಜಿ ಸಚಿವ ಎಚ್. ಆಂಜನೇಯ, ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಪ್ರಮೋದ ಹೆಗಡೆ ಮಾತನಾಡಿದರು. ಸಮಾರಂಭದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ಎಂ.ಎಂ. ಜೋಶಿ ಅವರಿಗೆ ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಬಿ.ಕೆ. ಹರಿಪ್ರಸಾದ ಕೆ.ಎಚ್. ಪಾಟೀಲ ಪ್ರತಿಷ್ಠಾನದ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು. ಶಾಸಕ ಎಚ್.ಕೆ. ಪಾಟೀಲ ಅಧ್ಯಕ್ಷತೆಯಲ್ಲಿ ದಿ. ಹುಲಕೋಟಿ ಕೋ-ಆಪ್ ಆಯಿಲ್ ಫೀಡ್ಸ್ ಸೊಸೈಟಿಯ ಸಾಮರ್ಥ್ಯ ವೃದ್ಧಿಗೊಂಡಿರುವ ಹುಲಕೋಟಿಯ ನವೀಕೃತ ಪಶು ಆಹಾರ ಉತ್ಪಾದನಾ ಘಟಕ, ಹುಲಕೋಟಿ ಸಹಕಾರ ಶಿಕ್ಷಣ ಸಂಸ್ಥೆಯ ಗ್ರಂಥಾಲಯವನ್ನು ಆಂಧ್ರಪ್ರದೇಶ ಬುಡಕಟ್ಟು ವಿವಿ ಕುಲಪತಿ ಡಾ. ತೇಜಸ್ವಿ ಕಟ್ಟಿಮನಿ ಉದ್ಘಾಟಿಸಿದರು. ಪ್ರೊ.ಐ.ಜಿ. ಸನದಿ, ಮಾಜಿ ಸಚಿವ ಎಚ್.ಎಂ.ರೇವಣ್ಣ, ಮಾಜಿ ಸಚಿವ ಎಸ್. ಎಸ್.ಪಾಟೀಲ, ಮಾಜಿ ಶಾಸಕ ಜಿ.ಎಸ್. ಗಡ್ಡದೇವರಮಠ, ಜಿ.ಪಂ ಮಾಜಿ ಅಧ್ಯಕ್ಷ ವಾಸಣ್ಣ ಕುರುಡಗಿ, ಎಸ್.ಪಿ.ಬಳಿಗಾರ, ಸಿದ್ಧಲಿಂಗೇಶ್ವರ ಪಾಟೀಲ, ಮಾಜಿ ಶಾಸಕ ಡಿ.ಆರ್. ಪಾಟೀಲ ಉಪಸ್ಥಿತರಿದ್ದರು.



ಗದಗ ನಗರದ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ನಡೆದ ಕೆ.ಎಚ್. ಪಾಟೀಲ ಜಯಂತ್ಯುತ್ಸವದಲ್ಲಿ ಡಾ. ಎಂ.ಎಂ. ಜೋಶಿ ಅವರಿಗೆ ಕೆ.ಎಚ್. ಪಾಟೀಲ ಪ್ರತಿಷ್ಠಾನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕೆ.ಎಚ್. ಪಾಟೀಲರು ನೇರ ನುಡಿಯ ರಾಜಕಾರಣಿಯಾಗಿದ್ದರು. ಕೆಪಿಸಿಸಿ ಅಧ್ಯಕ್ಷ ಹುದ್ದೆಗೆ ಪರಮಾಧಿಕಾರ ಕಲ್ಪಿಸಿದ ಶ್ರೇಯಸ್ಸು ಕೆ.ಎಚ್.ಪಾಟೀಲರಿಗೆ ಸಲ್ಲಬೇಕು. ದೇವರಾಜು ಅರಸು ನಂತರ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ತರುವಲ್ಲಿ ಕೆ.ಎಚ್. ಪಾಟೀಲ ಕೊಡುಗೆ ಅಪಾರ.

■ **ಕೆ.ಎಚ್.ಮುನಿಯಪ್ಪ,**
| ಮಾಜಿ ಸಂಸದ



**ಗದಗ :** ಸಹಕಾರ ರಂಗದ ಭೀಷ್ಮ ಕೆ.ಎಚ್. ಪಾಟೀಲ ಅವರ ೯೮ನೇ ಜಯಂತ್ಯುತ್ಸವ ನಿಮಿತ್ತ ನಗರದ ಹುಲಕೋಟಿ ಸಹಕಾರ ಶಿಕ್ಷಣ ಸಂಸ್ಥೆಯ ಮಹಾವಿದ್ಯಾಲಯದ ಕಟ್ಟಡದಲ್ಲಿ ದಿ. ಎಂ.ವಿ. ಮೂಲಿಮನಿ ಅವರ ಭಾವಚಿತ್ರವನ್ನು ಮಾಜಿ ಸಚಿವ ಎಚ್.ಎಂ. ರೇವಣ್ಣ ಅನಾವರಣಗೊಳಿಸಿದರು. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕೇಂದ್ರದ ಮಾಜಿ ಸಚಿವ ಕೆ.ಎಚ್. ಮುನಿಯಪ್ಪ, ಗದಗ ಕ್ಷೇತ್ರದ ಶಾಸಕರು, ಮಹಾರಾಷ್ಟ್ರ ಕಾಂಗ್ರೆಸ್ ಉಸ್ತುವಾರಿ ಎಚ್.ಕೆ. ಪಾಟೀಲ, ಮಾಜಿ ಸಚಿವರಾದ ಎಸ್.ಎಸ್. ಪಾಟೀಲ, ಎ.ಎಂ. ಹಿಂಡಸಗೇರಿ, ಮಾಜಿ ಶಾಸಕರಾದ ಡಿ.ಆರ್. ಪಾಟೀಲ, ಜಿ.ಎಸ್. ಗಡ್ಡದ್ದೇವರಮಠ, ಗದಗ ಜಿಪಂ ಮಾಜಿ ಅಧ್ಯಕ್ಷ ವಾಸಣ್ಣ ಕುರಡಗಿ ಸೇರಿ ಅನೇಕರಿದ್ದರು.



**ಗದಗ:** ಸಹಕಾರ ರಂಗದ ಭೀಷ್ಮ ಕೆ.ಎಚ್. ಪಾಟೀಲ ಅವರ ೯೮ನೇ ಜಯಂತ್ಯುತ್ಸವ ನಿಮಿತ್ತ ನಗರದ ಹುಲಕೋಟಿ ಸಹಕಾರ ಶಿಕ್ಷಣ ಸಂಸ್ಥೆಯ ಗ್ರಂಥಾಲಯ ಕಟ್ಟಡವನ್ನು ಆಂಧ್ರಪ್ರದೇಶದ ಟ್ರೈಬಲ್ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ತೇಜಸ್ವಿ ಕಟ್ಟಿಮನಿ ಉದ್ಘಾಟಿಸಿದರು. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಗದಗ ಕ್ಷೇತ್ರದ ಶಾಸಕರು, ಮಹಾರಾಷ್ಟ್ರ ಕಾಂಗ್ರೆಸ್ ಉಸ್ತುವಾರಿ ಎಚ್.ಕೆ. ಪಾಟೀಲ, ಕೇಂದ್ರದ ಮಾಜಿ ಸಚಿವ ಕೆ.ಎಚ್. ಮುನಿಯಪ್ಪ, ಮಾಜಿ ಸಚಿವರಾದ ಎಸ್.ಎಸ್. ಪಾಟೀಲ, ಎ.ಎಂ. ಹಿಂಡಸಗೇರಿ, ಎಚ್.ಎಂ. ರೇವಣ್ಣ, ಮಾಜಿ ಶಾಸಕರಾದ ಡಿ.ಆರ್. ಪಾಟೀಲ, ಜಿ.ಎಸ್. ಗಡ್ಡದ್ದೇವರಮಠ, ಗದಗ ಜಿಪಂ ಮಾಜಿ ಅಧ್ಯಕ್ಷ ವಾಸಣ್ಣ ಕುರಡಗಿ ಸೇರಿ ಅನೇಕರಿದ್ದರು.



**ಗದಗ :** ಸಹಕಾರ ರಂಗದ ಭೀಷ್ಮ ಕೆ.ಎಚ್. ಪಾಟೀಲ ಅವರ ೯೮ನೇ ಜಯಂತ್ಯುತ್ಸವ ನಿಮಿತ್ತ ನಗರದ ಎಪಿಎಂಸಿ ಪ್ರಾಂಗಣದಲ್ಲಿರುವ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ಕೆ.ಎಚ್. ಪಾಟೀಲ ಪ್ರತಿಷ್ಠಾನ ಹಾಗೂ ಗದಗ ಪರಿಸರದ ಸಹಕಾರಿಗಳ ಸಂಯುಕ್ತ ಆಶ್ರಯದಲ್ಲಿ ಗುರುವಾರ ನಡೆದ ಸಹಕಾರ ರಂಗದ ಭೀಷ್ಮ ಕೆ.ಎಚ್. ಪಾಟೀಲ ಅವರ ೯೮ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ನೇತ್ರತಜ್ಞ ಡಾ. ಎಂ.ಎಂ. ಜೋಶಿ ಅವರಿಗೆ ಕೆ.ಎಚ್. ಪಾಟೀಲ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರಶಸ್ತಿಯು ಐದು ಲಕ್ಷ ರೂ. ನಗದು ಒಳಗೊಂಡಿದೆ. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಶಾಸಕರು, ಮಹಾರಾಷ್ಟ್ರ ಕಾಂಗ್ರೆಸ್ ಉಸ್ತುವಾರಿ ಎಚ್.ಕೆ. ಪಾಟೀಲ, ಕೇಂದ್ರದ ಮಾಜಿ ಸಚಿವ ಕೆ.ಎಚ್. ಮುನಿಯಪ್ಪ, ಮಾಜಿ ಸಚಿವರಾದ ಎಸ್.ಎಸ್. ಪಾಟೀಲ, ಎ.ಎಂ. ಹಿಂಡಸಗೇರಿ, ಎಚ್.ಎಂ. ರೇವಣ್ಣ, ಮಾಜಿ ಶಾಸಕರಾದ ಡಿ.ಆರ್. ಪಾಟೀಲ, ಜಿ.ಎಸ್. ಗಡ್ಡದ್ದೇವರಮಠ, ಗದಗ ಜಿಪಂ ಮಾಜಿ ಅಧ್ಯಕ್ಷ ವಾಸಣ್ಣ ಕುರಡಗಿ, ಆಂಧ್ರಪ್ರದೇಶದ ಟ್ರೈಬಲ್ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ತೇಜಸ್ವಿ ಕಟ್ಟಿಮನಿ ಸೇರಿ ಅನೇಕರಿದ್ದರು.

### ಕೆ.ಎಚ್. ಪಾಟೀಲ ಅವರ ೯೮ನೇ ಜಯಂತ್ಯುತ್ಸವ ಕಾರ್ಯಕ್ರಮ

# ಇಂದು ರಾಜಕಾರಣಿಗಳು ಗೌರವ ಕಳೆದುಕೊಳ್ಳುತ್ತಿದ್ದಾರೆ

ಕಿತ್ತೂರ ಕರ್ನಾಟಕ ವಾರ್ತೆ

**ಗದಗ, ೧೬ :** ಈ ಹಿಂದೆಲ್ಲ ಗೌರವ, ಮರ್ಯಾದೆಯನ್ನು ಇಟ್ಟುಕೊಂಡು ರಾಜಕೀಯಕ್ಕೆ ಬರುತ್ತಿದ್ದರು. ಇಂದು ಬದಲಾದ ಸನ್ನಿವೇಶದಲ್ಲಿ ರಾಜಕೀಯ ನಾಯಕರು ಗೌರವ ಕಳೆದುಕೊಳ್ಳುತ್ತಿದ್ದಾರೆ. ರಾಜಕಾರಣ ಇಂದು ಉದ್ಯೋಗವಾಗುತ್ತಿದೆ. ಇಂದಿನ ರಾಜಕಾರಣಕ್ಕೆ ಬರುವವರು ಗೌರವ, ಮರ್ಯಾದೆ ಇಟ್ಟುಕೊಂಡು ರಾಜಕಾರಣ ಮಾಡಬೇಕು. ಯಾವ ಕ್ಷೇತ್ರದಲ್ಲಿ ಜನ ಆರಿಸುತ್ತಾರೋ ಅವರ ಕೆಲಸ ಮಾಡಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಹೇಳಿದರು.

ನಗರದ ಎಪಿಎಂಸಿ ಪ್ರಾಂಗಣದಲ್ಲಿರುವ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ಕೆ.ಎಚ್. ಪಾಟೀಲ ಪ್ರತಿಷ್ಠಾನ ಹಾಗೂ ಗದಗ ಪರಿಸರದ ಸಹಕಾರಿಗಳ ಸಂಯುಕ್ತ ಆಶ್ರಯದಲ್ಲಿ ಗುರುವಾರ ನಡೆದ ಸಹಕಾರ ರಂಗದ ಭೀಷ್ಮ ಕೆ.ಎಚ್. ಪಾಟೀಲ ಅವರ ೯೮ನೇ ಜಯಂತ್ಯುತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಾನು ವಿಧಾನ ಪರಿಷತ್ ಸದಸ್ಯನಾದಾಗಿನಿಂದ ಈವರೆಗೆ ೧೮ ಮುಖ್ಯಮಂತ್ರಿಗಳನ್ನು, ಸಾವಿರಕ್ಕೂ ಹೆಚ್ಚು ಸಚಿವರನ್ನು ನೋಡಿದ್ದೇನೆ. ಅಂದಿನ ರಾಜಕಾರಣಕ್ಕೂ ಇಂದಿನ ರಾಜಕಾರಣಕ್ಕೂ ಬಹಳ ವ್ಯತ್ಯಾಸವಿದೆ. ಶಿಕ್ಷಕರಿಗಾಗಿ ವಿಶಾಲ ಕರ್ನಾಟಕದಿಂದ ಆರಂಭವಾದ ನನ್ನ ಹೋರಾಟವನ್ನು ಗಮನಿಸಿದ್ದ ಕೆ.ಎ.ಚ್. ಪಾಟೀಲ ಅವರು ನಾನು ವಿಧಾನ ಪರಿಷತ್ ಚುನಾವಣೆಗೆ ಮೊದಲ ಬಾರಿ ಸ್ಪರ್ಧಿಸಿದ ಸಂದರ್ಭದಲ್ಲಿ ನನ್ನ ಬೆನ್ನೆಲುಬಾಗಿ ನಿಂತು ನನ್ನ ಮೊದಲ ಜಯಕ್ಕೆ ಕಾರಣರಾಗಿದ್ದರು. ನೇರ ನುಡಿ,

(೮ನೇ ಪುಟಕ್ಕೆ)



ಕೆಲ ವ್ಯಕ್ತಿಗಳು ಅಧಿಕಾರವಿದ್ದರೂ, ಶ್ರೀಮಂತರಾಗಿದ್ದರೂ ಯಾರಿಗೂ ಉಪಕಾರ ಮಾಡದೇ ಜೀವನದಲ್ಲಿ ಇದ್ದರೂ ಸತ್ತಂತೆ ಇರುತ್ತಾರೆ. ಕೆಲ ವ್ಯಕ್ತಿಗಳು ತಮ್ಮ ವ್ಯಕ್ತಿತ್ವದಿಂದಲೇ ಸತ್ತರೂ ಬದುಕಿರುತ್ತಾರೆ. ಅವರ ಸಾಲಿಗೆ ದಿ. ಕೆ.ಎಚ್. ಪಾಟೀಲ ಸೇರುತ್ತಾರೆ. ಕಠೋರ ಮಾತುಗಳನ್ನಾಡುತ್ತಿದ್ದ ಕೆ.ಎಚ್. ಪಾಟೀಲ ಅವರು, ಅಷ್ಟೇ ಪ್ರೀತಿಯಲ್ಲಿ ಜನರ ಹೃದಯದಲ್ಲಿ ನೆಲೆಸಿದ್ದಾರೆ.

**ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸಭಾಪತಿ**

ದಿ. ಕೆ.ಎಚ್. ಪಾಟೀಲ ಅವರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಹುಲಕೋಟಿ ಹುಲಿ ಹಾಗೆ ಗರ್ಜನೆ ಮಾಡುತ್ತಿದ್ದರು. ದಿಟ್ಟವಾದ ನಿರ್ಧಾರ ಕೈಗೊಳ್ಳುತ್ತಿದ್ದರು. ಕೆ.ಎಚ್. ಪಾಟೀಲ ಅವರ ಪಕ್ಷದಲ್ಲಿನ ಶಿಸ್ತು, ಬದ್ಧತೆಯನ್ನು ನಾವು ಇಂದು ರೂಢಿಸಿಕೊಂಡಿದ್ದೇವೆ.

**ಕೆ.ಎಚ್. ಮುನಿಯಪ್ಪ, ಮಾಜಿ ಸಂಸದ**

# ಅಂಧತ್ವ ಮುಕ್ತ ಗದಗ ಮತಕ್ಷೇತ್ರದ ಗುರಿ



**ಕಿತ್ತೂರ ಕರ್ನಾಟಕ ವಾರ್ತೆ**

**ಗದಗ, ೧೬ :** ಕೆ.ಎಚ್. ಪಾಟೀಲ ಅವರ ಮುಂದಿನ ಜಯಂತಿ ವೇಳೆಗೆ ಗದಗ ವಿಧಾನಸಭಾ ಮತಕ್ಷೇತ್ರವನ್ನು ಅಂಧತ್ವ ಮುಕ್ತ ಕ್ಷೇತ್ರವನ್ನಾಗಿಸಲಾಗುವುದು ಎಂದು ಗದಗ ಕ್ಷೇತ್ರದ ಶಾಸಕ, ಮಹಾರಾಷ್ಟ್ರ ಕಾಂಗ್ರೆಸ್ ಉಸ್ತುವಾರಿ ಎಚ್.ಕೆ. ಪಾಟೀಲ ಹೇಳಿದರು.

ನಗರದ ಎಪಿಎಂಸಿ ಪ್ರಾಂಗಣದಲ್ಲಿರುವ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ಕೆ.ಎಚ್. ಪಾಟೀಲ ಪ್ರತಿಷ್ಠಾನ ಹಾಗೂ ಗದಗ ಪರಿಸರದ ಸಹಕಾರಿಗಳ ಸಂಯುಕ್ತ ಆಶ್ರಯದಲ್ಲಿ ಗುರುವಾರ ನಡೆದ ಸಹಕಾರ ರಂಗದ ಭೀಷ್ಮ ಕೆ.ಎಚ್. ಪಾಟೀಲ ಅವರ ೯೮ನೇ ಜಯಂತ್ಯುತ್ಸವ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

ಗದಗ ವಿಧಾನಸಭಾ ಮತಕ್ಷೇತ್ರದಲ್ಲಿ ಅಂಧತ್ವ ನಿವಾರಣೆಗಾಗಿ ವಿಶೇಷ ಅಭಿಯಾನ ನಡೆಯುತ್ತಿದ್ದು, ಇದರ ಭಾಗವಾಗಿ ಕ್ಷೇತ್ರದ ೧೨೦೦ ಜನರ ಕಣ್ಣಿನ ಶಸ್ತ್ರಚಿಕಿತ್ಸೆಯನ್ನು ಉಚಿತವಾಗಿ ಮಾಡಲಾಗಿದೆ ಎಂದು ಹೇಳಿದರು. ಬಡವರಾಗಿರುವ ಹಿರಿಯ ಜೀವಗಳು ಯಾರೊಬ್ಬರೂ ಕೂಡ ಅಂಧತ್ವದಿಂದ ಬಳಲಬಾರದು. ಆರ್ಥಿಕವಾಗಿ ಅನಾನೂಕೂಲ ಇರುವವರಿಗೆ ಅಂಧತ ನಿವಾರಣೆ ಮಾಡಲಾಗುತ್ತಿದೆ. ಹೀಗಾಗಿ ಮುಂದಿನ ಮಾರ್ಚ ೧೬ ರೊಳಗೆ ಅಂಧತ್ವ ಮುಕ್ತವಾಗುವುದು ಎಂದು ಹೇಳಿದರು.

ಕೆ.ಎಚ್.ಪಾಟೀಲರ ಇಚ್ಚೆಯಂತೆ ಅವರ ಜನ್ಮದಿನದಂದು ರಚನಾತ್ಮಕ ಕೆಲಸ ಮಾಡಿಕೊಂಡು ಬರಲಾಗುತ್ತಿದೆ. ಅವರು ಸಮುದಾಯದ ಸಹಭಾಗಿತ್ವದಲ್ಲಿ ಸಹಕಾರಿ ಸಂಸ್ಥೆಯನ್ನು ಬೆಳೆಸಿದ್ದಾರೆ ಎಂದು ಹೇಳಿದರು.

ಆಂಧ್ರಪ್ರದೇಶದ ಟ್ರೈಬಲ್ ವಿಶ್ವವಿದ್ಯಾಲ ಯದ ಉಪಕುಲಪತಿ ಡಾ. ತೇಜಸ್ವಿ ಕಟ್ಟಿಮನಿ ಅವರು ರಾಷ್ಟ್ರೀಯ ಶಿಕ್ಷಣ ನೀತಿ ಆಯೋಗದ ಸದಸ್ಯರಾಗಿ ಉತ್ತಮ ಸೇವೆ ಮಾಡಿದ್ದಾರೆ. ಇನ್ನು ಪರಿಷತ್ ಸಭಾಪತಿ ಆಗಿರುವ ಬಸವರಾಜ ಹೊರಟ್ಟಿ ಅವರು ನಮ್ಮ ನಡುವೆ ಅವಿನಾಭಾವ ನಂಟಿದೆ. ರಾಜಕೀಯ ಹೊರತಾಗಿಯೂ ಉತ್ತಮ ಬಾಂಧವ್ಯವಿದೆ.

ಮಾರ್ಚ ೧೬ ಪ್ರೇರಣೆದಾಯಕ ದಿನ. ಸೇವಾ ತಂಡಗಳ ಮೂಲಕ ಬಡವರ ಮನೆಗೆ ಭೇಟಿ ನೀಡಿ ಸಮಸ್ಯೆ ನಿವಾರಣೆ ಮಾಡಿರುವುದು ಮಾನವೀಯ ಕಾರ್ಯ ಎಂದು ಬಣ್ಣಿಸಿದರು.

ಪ್ರತಿಷ್ಠಾನದ ಅಧ್ಯಕ್ಷ ಹಾಗೂ ಮಾಜಿ ಶಾಸಕ ಡಿ.ಆರ್. ಪಾಟೀಲ ಸೇರಿ ಅನೇಕರಿದ್ದರು.

# ದಿ : 18 ರಂದು ಶ್ರೀಮತಿ ಹೇಮಲತಾ ಬಸವರಾಜ ಹೊರಟ್ಟಿ ಸಹಕಾರದಿಂದ ನಿರ್ಮಾಣಗೊಳುತ್ತಿರುವ



ಗದಗ : ದಿನಾಂಕ : 18 ರಂದು ಮುಂಜಾನೆ 10.30 ಗಂಟೆಗೆ ಸರಕಾರಿ ಪ್ರೌಢಶಾಲೆ ಸಿದ್ಧಲಿಂಗ ನಗರದಲ್ಲಿ ಹುಬ್ಬಳ್ಳಿಯ ಅವ್ವ ಸೇವಾ ಟ್ರಸ್ಟಿನ ನಿರ್ದೇಶಕರಾದ ಶ್ರೀಮತಿ ಹೇಮಲತಾ ಬಸವರಾಜ ಹೊರಟ್ಟಿಯವರ ಸಹಕಾರದಿಂದ ನಿರ್ಮಾಣಗೊಳುತ್ತಿರುವ ಗಣಿತ ಪ್ರಯೋಗಾಲಯ ಹಾಗೂ ಸಂಶೋಧನಾ ಕೇಂದ್ರಕ್ಕೆ ಚಾಲನೆಯನ್ನು ಗದಗ ತಾಲೂಕಿನ ಶಾಸಕರಾದ ಎಚ್.ಕೆ. ಪಾಟೀಲರವರು ನೀಡಲಿದ್ದಾರೆಂದು ಡಾ.ಬಸವರಾಜ ಧಾರವಾಡ ತಿಳಿಸಿದ್ದಾರೆ.

ಸಭಾಪತಿ ಬಸವರಾಜ ಹೊರಟ್ಟಿಯವರ ಘನ ಉಪಸ್ಥಿತಿಯಲ್ಲಿ ವಿವಿಧ ಗಣ್ಯಮಾನ್ಯರ ಸಮ್ಮುಖದಲ್ಲಿ ಗಣಿತ ಪ್ರಯೋಗಾಲಯ ಹಾಗೂ ಸಂಶೋಧನಾ ಕೇಂದ್ರಕ್ಕೆ ಚಾಲನೆ ದೊರೆಯಲಿದ್ದು ಗಣಿತದ ಮಹತ್ವದ ಕುರಿತು ಅರಿವು ಮೂಡಿಸುವ ಈ ಕೇಂದ್ರದ ಮೂಲಕ ಶಾಲೆಯ ಪ್ರತಿ ವಿದ್ಯಾರ್ಥಿಯು ಗಣಿತ ಚಟುವಟಿಕೆ/ಪ್ರಯೋಗಗಳಲ್ಲಿ ಭಾಗವಹಿಸುವಂತೆ ಮಾಡುವುದು., ವಿದ್ಯಾರ್ಥಿಗಳಲ್ಲಿ ಗಣಿತ ಪ್ರಯೋಗಗಳ ಮೂಲಕ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗುವಂತೆ ನೋಡಿಕೊಳ್ಳುವುದು, ವಿದ್ಯಾರ್ಥಿಗಳಿಗೆ ಗಣಿತ ಪ್ರಯೋಗಗಳ ಮೂಲಕ ಕೌಶಲ್ಯದ ಜೊತೆಗೆ ಸ್ವತಃ ತಾವೇ ಮಾದರಿ ತಯಾರಿಸುವತ್ತ ಮಕ್ಕಳನ್ನು ಆಕರ್ಷಿಸುವುದು, ವಿದ್ಯಾರ್ಥಿಗಳ ಹೊಸ ವಿಚಾರ ನೂತನ ಚಿಂತನೆ ಗಣಿತ ವಿಷಯಗಳ ನಾವೀನ್ಯತೆಗೆ ಹೆಚ್ಚು ಒತ್ತನ್ನು ನೀಡುವುದು, ವಿದ್ಯಾರ್ಥಿಗಳಲ್ಲಿ ಗಣಿತ ಕಲಿಕೆಯನ್ನು ಸರಳ ಹಾಗೂ ಸ್ಪಷ್ಟವಾಗಿ ಕಲಿಯುವಂತೆ ಹಾಗೂ ಲೀಲಾಜಾಲವಾಗಿ ಗಣಿತ ಲೆಕ್ಕವನ್ನು ಮಾಡುವಂತೆ ಸುಲಭ ವಿಧಾನಗಳ ಮೂಲಕ ಕಲಿಸುವುದು, ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಮನೋಭಾವ ಹೆಚ್ಚಿಸುವ ನಿಟ್ಟಿನಲ್ಲಿ ವಿಜ್ಞಾನ ಪ್ರಯೋಗಗಳ ಮೂಲಕ ವೈಜ್ಞಾನಿಕತೆ ಮೂಡಿಸುವುದು, ಶಿಕ್ಷಕರು ವಿಜ್ಞಾನ ಬೋಧನಾ ಮಾದರಿಗಳನ್ನು ತರಗತಿಗಳಿಗೆ ಬಳಸಿಕೊಳ್ಳುವುದು, ವಿದ್ಯಾರ್ಥಿಗಳಲ್ಲಿ ಸಂಶೋಧನಾ ಮನೋಭಾವವನ್ನು ಹುಟ್ಟು ಹಾಕುವುದು, ವಿದ್ಯಾರ್ಥಿಗಳಿಗೆ ವಿಜ್ಞಾನದ ಬಗ್ಗೆ ಹೆಚ್ಚೆಚ್ಚು ಆಸಕ್ತಿ ಮೂಡಿಸುವುದು, ಹೀಗೆ ಹತ್ತು ಹಲವು ವಿಚಾರಗಳನ್ನು ಗಣಿತ ಹಾಗೂ ವಿಜ್ಞಾನ ವಿಷಯಗಳಲ್ಲಿ ಹೆಚ್ಚೆಚ್ಚು ಚಿಂತನೆಗಳನ್ನು ಮೂಡಿಸುವ ಈ ಪ್ರಯೋಗಾಲಯ ಪ್ರೌಢಶಾಲಾ ಮಟ್ಟದಲ್ಲಿ ಅತ್ಯಂತ ಉಪಯುಕ್ತವಾಗುತ್ತದೆ ಎಂದು ಮಾರ್ಗದರ್ಶಕರಾದ ಡಾ.ವೀರಣ್ಣ ಬೋಳಶೆಟ್ಟಿ, ಎಸ್.ಎಸ್.ಮುಳಗುಂದಮಠ, ಡಾ.ಬಸವರಾಜ ಧಾರವಾಡ, ಹಾಗೂ ತರಬೇತುದಾರರಾದ ಶ್ರೀಮತಿ ಸುಮಂಗಲಾ.ಎಂ. ಪತ್ತಾರ, ಶ್ರೀಮತಿ ಶಾರದಾ.ಎ.ಬಾಣದ, ಆರ್.ವಾಯ್.ಬಸರಿ ತಿಳಿಸಿದ್ದಾರೆ.